**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.1673/2024**

**ಪಿರ್ಯಾದಿ** : ರಾಜ್ಯ ಸರ್ಕಾರ,
ಗೋಣಿಕೊಪ್ಪ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : 1. ಶ್ರೀ ಮಂಜುನಾಥ ಹೆಚ್.ಎಮ್,
ತಂದೆಃ ಪೌತಿ ಮಾದೇವ,
ಪ್ರಾಯ 48 ವರ್ಷ
ವಾಸಃ ವಿನಾಯಕ ನಗರ, ತಿತಿಮತಿ ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

2. ಶ್ರೀ ತುಳಸಿ ಹೆಚ್.ಎಮ್,
ತಂದೆಃ ಸೋಜಿಲ್ ಕೆ.ಎಸ್,
ಪ್ರಾಯಃ 23 ವರ್ಷ,
ವಾಸಃ ವಿನಾಯಕ ನಗರ, ತಿತಿಮತಿ ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ಆರೋಪಣೆ**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 10.09.2024ರಂದು ಸಮಯ ಸಂಜೆ 4.00 ಗಂಟೆಗೆ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ತಿತಿಮತಿ ಗ್ರಾಮದ ಬಾಳುಮನಿ ಎಸ್ಟೇಟ್ ಬಳಿ ಮೈಸೂರು - ತಲಚೇರಿ ರಾಜ್ಯ ಹೆದ್ದಾರಿ 90 ರಲ್ಲಿ ಸಾಕ್ಷಿ 1 ರಾಜು ರವರು ತಮ್ಮ ಭಾಪ್ತು ಕೆಎ.03.ಎಮ್ ಬಿ.3825 ರ ಮಾರುತಿ ಓಮಿನಿಯಲ್ಲಿ ಸಾಕ್ಷಿ 2, 3, 4, 5 ಮತ್ತು 6 ರವರನ್ನು ಕೂರಿಸಿಕೊಂಡು ಮೈಸೂರಿಗೆ ತೆರಳುತ್ತಿರುವಾಗ, 1ನೇ ಆರೋಪಿಯಾದ ನೀವು 2ನೇ ಆರೋಪಿಯ ಮಾಲೀಕತ್ವದ ಕೆಎ.12.ಸಿ.2186 ರ ಪ್ಯಾಸೆಂಜರ್ ಆರೋ ರಿಕ್ಷಾವನ್ನು ಮುಂಭಾಗದಲ್ಲಿ ಚಲಿಸುತ್ತಿದ್ದ ಮೋಟಾರ್ ಸೈಕಲನ್ನು ಓವರ್ ಟೇಕ್ ಮಾಡಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ 1 ರವರ ವ್ಯಾನಿಗೆ ಡಿಕ್ಕಿ ಪಡಿಸಿರುತ್ತೀರಿ ಎಂಬುದಾಗಿರುತ್ತದೆ. ಆ ಕಾರಣ 1ನೇ ಆರೋಪಿಯಾದ ನೀವು ಬಿ.ಎನ್.ಎಸ್ ಕಲಂ 281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 1ನೇ ಆರೋಪಿಯಾದ ನೀವು ಅಪಘಾತ ಒಡಿಸಿದ ಪರಿಣಾಮ ಓಮಿನಿ ವ್ಯಾನ್ ರಸ್ತೆ ಬದಿಯ ದಿಣ್ಣೆಗೆ ಮಗುಚಿ ಬಿದ್ದು, ವ್ಯಾನಿನ ಎರಡು ಕಡೆಗಳಲ್ಲಿ ಲೈಟ್ ಹಾಗೂ ಡೋರ್ಗಳು ಜಖಂಗೊಂಡಿರುತ್ತದೆ, ಮತ್ತು ಸಾಕ್ಷಿ 1 ರವರ ಎಡ ಕೈಗೆ ಮತ್ತು ಸೋಂಟದ ಭಾಗಕ್ಕೆ, ಸಾಕ್ಷಿ 2 ರವರ ಎಡ ಬಲ ಕೈ ಮಣಿಕಟ್ಟಿಗೆ, ತಲೆಯ ಬಲ ಭಾಗಕ್ಕೆ, ಸಾಕ್ಷಿ 3 ರವರ ತಲೆಯ ಬಲಭಾಗಕ್ಕೆ, ಬಲಭುಜಕ್ಕೆ,

ಎಡಕಾಲಿಗೆ, ಸಾಕ್ಷಿ 4 ರವರ ಬಲ ಮೊಣಕೈಗೆ ಮತ್ತು ಸಾಕ್ಷಿ 5 ರವರ ಎದೆಯ ಭಾಗಕ್ಕೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಆ ಕಾರಣ 1ನೇ ಆರೋಪಿಯಾದ ನೀವು ಬಿ.ಎನ್.ಎಸ್ ಕಲಂ 125(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 1ನೇ ಆರೋಪಿಯಾದ ನೀವು ನಿಮ್ಮ ಬಳಿ ಆಟೋವನ್ನು ಚಾಲನೆ ಮಾಡಲು ನಿಗದಿಪಡಿಸಿದ ವಾಹನ ಚಾಲನಾ ಪರವಾನಗಿ ಪತ್ರ ಇಲ್ಲದಿದ್ದರು ಆ ದಿನ ಆಟೋವನ್ನು ಚಾಲನೆ ಮಾಡಿರುತ್ತೀರಿ ಎಂಬುದಾಗಿರುತ್ತದೆ. ಆ ಕಾರಣ 1ನೇ ಆರೋಪಿಯಾದ ನಿಮ್ಮ ವಿರುದ್ಧ ಮೋಟಾರು ವಾಹನ ಕಾಯಿದೆ ಕಲಂ 3(1) ಸಹವಾಚಕ 181 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸದರಿ ಅಪಘಾತ ಪಡಿಸಿದ ನಂತರ ಸಾಕ್ಷಿ 1 ರಿಂದ 5 ರವರಿಗೆ ಚಿಕಿತ್ಸೆಯನ್ನು ಕೊಡಿಸದೆ, ಹತ್ತಿರದ ಪೋಲೀಸ್ ಠಾಣೆಗೆ ಯಾವುದೇ ಮಾಹಿತಿಯನ್ನು ನೀಡದೆ ಆಟೋವನ್ನು ನಿಲ್ಲಿಸದೆ ಹೋಗಿರುವ ಕಾರಣ ಮೋಟಾರು ವಾಹನ ಕಾಯ್ದೆ 187 ಸಹವಾಚಕ 134(ಎ)(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಐದನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 2ನೇ ಆರೋಪಿಯಾದ ನೀವು ಆಟೋ ಮಾಲೀಕರಾಗಿದ್ದು, 1ನೇ ಆರೋಪಿಯ ಬಳಿ ಆಟೋ ಚಾಲನೆ ಮಾಡಲು ಪರವಾನಗಿ ಇಲ್ಲ ಎಂದು ತಿಳಿದಿದ್ದರೂ ಆ ದಿನ ಆಟೋ ಚಾಲನೆ ಮಾಡಲು 1ನೇ ಆರೋಪಿಗೆ ನೀಡಿರುತ್ತೀರಿ ಎಂಬುದಾಗಿರುತ್ತದೆ. ಆ ಕಾರಣ 2ನೇ ಆರೋಪಿಯಾದ ನಿಮ್ಮ ವಿರುದ್ಧ ಮೋಟಾರು ವಾಹನ ಕಾಯಿದೆ ಕಲಂ 5 ಸಹವಾಚಕ 180 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 2ನೇ ಆರೋಪಿಯಾದ ನೀವು ಸದರಿ ಆಟೋ ಇನ್ಸೂರೆನ್ಸ್ ಅವದಿಯು ಮುಗಿದು ಹೋಗಿದ್ದರು ನವೀಕರಸದೇ 1ನೇ ಆರೋಪಿಗೆ ಚಾಲನೆ ಮಾಡಲು ನೀಡಿರುತ್ತೀರಿ ಎಂಬುದಾಗಿರುತ್ತದೆ. ಆ ಕಾರಣ 2ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯಿದೆ ಕಲಂ 146 ಸಹವಾಚಕ 196 ಮೋಟಾರು ವಾಹನ ಕಾಯ್ದೆ ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-

**ದಿಃ 27.03.2026** **ಸಿವಿಲ್ ನ್ಯಾಯಾಧೀಶರು ಮತ್ತು**

**ಸ್ಥಳಃ ಪೊನ್ನಂಪೇಟೆ** **ಪ್ರಧಾನ್ಯಾಯಾದಂ, ಪೊನ್ನಂಪೇಟೆ**

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.1673/2024**

| | | |
|---|---|---|
| **ಪಿರ್ಯಾದಿ** | : | ಕರ್ನಾಟಕ ಸರ್ಕಾರ,<br>ಗೋಣಿಕೊಪ್ಪ ಪೋಲೀಸ್, |
| | | **ವಿರುದ್ದ** |
| **ಆರೋಪಿ** | :1. | ಶ್ರೀ ಮಂಜುನಾಥ ಹೆಚ್.ಎಮ್, |

**ಭಾ.ನ್ಯಾ.ಸು.ಸಂಹಿತೆ ಕಲಂ 275 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರಃ ಅಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರಃ ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು 2ನೇ ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ನನ್ನಿಂದ ದಿಃ27.03.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

**Sd/-**

**ದಿಃ 27.03.2026**
**ಸ್ಥಳಃ ಪೊನ್ನಂಪೇಟೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದಾನ್ಯಾದಂ, ಪೊನ್ನಂಪೇಟೆ**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.1673/2024**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಗೋಣಿಕೊಪ್ಪ ಪೋಲೀಸ್,

**ವಿರುದ್ಧ**

**ಆರೋಪಿ** :2. ಶ್ರೀ ತುಳಸಿ ಹೆಚ್.ಎಮ್,

**ಭಾ.ನ್ಯಾ.ಸು.ಸಂಹಿತೆ ಕಲಂ 275 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರಃ ಅಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರಃ ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು 2ನೇ ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ನನ್ನಿಂದ ದಿಃ27.03.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

**Sd/-**

**ದಿಃ 27.03.2026** **ಸಿವಿಲ್ ನ್ಯಾಯಾಧೀಶರು ಮತ್ತು**
**ಸ್ಥಳಃ ಪೊನ್ನಂಪೇಟೆ** **ಪ್ರದಾನ್ಯಾದಂ, ಪೊನ್ನಂಪೇಟೆ**